ಒಎಸ್ ಸಂ.ಃ32/2015
ಪಿಡಬ್ಲ್ಯೂ ಃ 01 (ಪಾರ್ವತಮ್ಮ)
ದಿನಾಂಕ 14-12-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ- ಶ್ರೀ ಎನ್‌ಪಿಕೆ ವಕೀಲರಿಂದ

ಸಾಕ್ಷಿಯು ತನಗೆ ಕನ್ನಡ ಭಾಷೆ ಬರುವುದಿಲ್ಲವೆಂದು ತೆಲಗು ಭಾಷೆ ಸಂಪೂರ್ಣವಾಗಿ ಬರುತ್ತದೆ ಎಂದು ಹೇಳಿದ್ದರಿಂದ ತೆಲಗು ಭಾಷೆ ತಿಳಿದಿರುವ ಶ್ರೀ ಜೆ ಎಂ ಟಿ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಲಾಯಿತು.

ಭಾಷಾ ತರ್ಜುಮೆದಾರರಿಗೂ ಸಹ ಪ್ರಮಾಣ ವಚನ ಭೋಧಿಸಲಾಯಿತು.

ಸರ್ವೆ ನಂ.29/3 ರ ಪಹಣಿ ಪತ್ರಿಕೆಯ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 1 ಎಂದು, ಸರ್ವೆ ನಂ.3 ರ ಪಹಣಿ ಪತ್ರಿಕೆಯ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 2 ಎಂದು, ಸರ್ವೆ ನಂ.29/3 ರ ಪಹಣಿ ಪತ್ರಿಕೆಯ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 3 ರಿಂದ 5 ಎಂದು, ಸರ್ವೆ ನಂ.29/4 ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 6 ಎಂದು, ಸರ್ವೆ ನಂ.29/3 ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 7 ಎಂದು, ಸರ್ವೆ ನಂ.29/4 ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 8 ಎಂದು, 1996-97 ರಲ್ಲಿ ಸರ್ವೆ ನಂ.29/3 ಅಸ್ತಿಯನ್ನು ಶಾರದಮ್ಮ ರವರಿಗೆ ಎನ್.ಎಸ್ ನಾರಾಯಣಪ್ಪ ಇವರು ಬರೆದುಕೊಟ್ಟ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 9 ಎಂದು, 2000 ಇಸವಿಯಲ್ಲಿ ಸರ್ವೆ ನಂ.29/4 ಆಸ್ತಿಯನ್ನು ಪ್ರಸಾದ್‌ರೆಡ್ಡಿಯವರಿಗೆ ಶಾರದಮ್ಮ ಬರೆದುಕೊಟ್ಟಂತಹ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 10 ಎಂದು, ದಿನಾಂಕ 30.03.1999 ರಲ್ಲಿ ಸರ್ವೆ ನಂ.29/3 ಆಸ್ತಿಯನ್ನು ನಾಗರಾಜರವರಿಗೆ ಎಸ್ ನಾಗರಾಜರವರು ಬರೆದುಕೊಟ್ಟಂತಹ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 11 ಎಂದು, ದಿನಾಂಕ 28.06.2000 ರಂದು ಸರ್ವೆ ನಂ.29/3 ರಲ್ಲಿ 4 ಗುಂಟೆ ಆಸ್ತಿಯನ್ನು ಕೆ.ನಾಗರಾಜರವರಿಗೆ ಎಂ.ನಾಗರಾಜರವರು ಬರೆದುಕೊಟ್ಟಂತಹ ಕ್ರಯಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 12 ಎಂದು ಗುರುತಿಸಲಾಯಿತು. ನಮೂನೆ-15 ರ ದೃಡೀಕೃತ ನಕಲನ್ನು ಹಾಜರು

ಪಡಿಸಿದ್ದು ಅದನ್ನು ನಿ ಪಿ 13 ಎಂದು, ಎಂ.ಆರ್ ನಂ.2/07-08ರ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಯನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.

ಸಾಕ್ಷಿದಾರರ ಸಹಿ

ಭಾಷಾ ತರ್ಜುಮೆದಾರರ ಸಹಿ.